ಕರ್ನಾಟಕ ಸರ್ಕಾರ

ದಿನಾಂಕ: 29–08–2017

# ಶಾಲೆಯ ದಿನಗಳ ಮೆಲುಕು ಹಾಕಿದ ಮುಖ್ಯಮಂತ್ರಿ



**ಮೈಸೂರು:** ಮೈಸೂರು ತಾಲೂಕಿನ ಕುಪ್ಪೇಗಾಲ ಗ್ರಾಮದಲ್ಲಿ ಮಂಗಳವಾರ ಹಬ್ಬದ ವಾತಾವರಣ.

ಇದೇ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ತಳಿರು ತೋರಣ, ಬಣ್ಣ ಬಣ್ಣದ ದೀಪಗಳಿಂದ ಕಂಗೊಳಿಸುತ್ತಿತ್ತು.

ನವ ವಧುವಿನಂತೆ ಸಿಂಗಾರ ಮಾಡಿಕೊಂಡಿದ್ದ ಶಾಲೆಯ ಆವರಣದಲ್ಲಿ ಮಕ್ಕಳಿಂದ ವೃದ್ದರವರೆಗೆ ಎಲ್ಲರಲ್ಲೂ ಸಂತಸ, ಸಂಭ್ರಮ ಮನೆ ಮಾಡಿತ್ತು.

ಎಲ್ಲರ ದೃಷ್ಟಿ ಒಬ್ಬರತ್ತ ಮಾತ್ರ ನೆಟ್ಟಿತ್ತು. ಆ ಒಬ್ಬರ ಕಣ್ಣುಗಳು ಮಾತ್ರ ಶಾಲೆಯನ್ನು ಆವರಿಸಿತ್ತು.

ಕಾರಣ, ಆ ಶಾಲೆ ಅವರ ಶಿಕ್ಷಣ ಬದುಕಿಗೆ ತಿರುವು ಕೊಟ್ಟ ಶಾಲೆ. ಅಕ್ಷರ ಸಂಸ್ಕೃತಿಯನ್ನು ಕಟ್ಟಿಕೊಟ್ಟ ಶಾಲೆ. ಹೀಗಾಗಿ ಶಾಲಾ ಕಟ್ಟಡ ನೋಡಿದ ಕೂಡಲೇ ಅವರ ನೆನಪು ಸರ್ರನೇ ಬಾಲ್ಯದ ದಿನಗಳ ಕಡೆ ಸಹಜವಾಗಿಯೇ ಹೊರಳಿತು.

ಆಟ, ಪಾಠದ ಜೊತೆಗೆ ಶಾಲೆಯಲ್ಲಿ ಕಲಿತ ದಿನಗಳು ಕಣ್ಣಮುಂದೆ ಹಾದು ಹೋಯಿತು. ಅವರಲ್ಲಿಯೂ ಸಂಭ್ರಮ ಮನೆ ಮಾಡಿತು.

ಕುಪ್ಪೇಗಾಲದ ಆ ಶಾಲೆಯ ಹಳೆಯ ವಿದ್ಯಾರ್ಥಿಯಾದ ಅವರು ಬೇರಾರೂ ಅಲ್ಲ. ನಾಡಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು.

ಸರ್ಕಾರಿ ಶಾಲೆಗಳ ಉನ್ನತೀಕರಣಕ್ಕಾಗಿ ರಾಜ್ಯ ಮಕ್ಕಳ ಆಯೋಗ ರೂಪಿಸಿರುವ 'ನಾ ಕಲಿತ ಶಾಲೆಯ ತೀರಿಸುವೆ ಋಣವ' ಕಾರ್ಯಕ್ರಮದಲ್ಲಿ ಭಾಗವಹಿಸಲು ಮುಖ್ಯಮಂತ್ರಿಗಳು ಶಾಲೆಗೆ ಬಂದಾಗ ಗ್ರಾಮಸ್ಥರು ಹರ್ಷೋದ್ಗಾರದ ಸ್ವಾಗತ ಕೋರಿದರು.

ಹಳೆಯ ನೆನಪುಗಳನ್ನು ಮೆಲಕು ಹಾಕುತ್ತಲೇ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘದ ಉದ್ಘಾಟನೆ ನೆರವೇರಿಸಿದ ಮುಖ್ಯಮಂತ್ರಿಗಳು, ಸಂಘದ ಗೌರವ ಅಧ್ಯಕ್ಷ ಸ್ಥಾನವನ್ನೂ ಸ್ವೀಕರಿಸಿದರು.

ಉದ್ಘಾಟನೆ ನೆರವೇರಿಸಿ ಮಾತಿಗಿಳಿದ ಮುಖ್ಯಮಂತ್ರಿಗಳು, ವೇದಿಕೆ ಮುಂಭಾಗ ನೂರಾರು ಸಂಖ್ಯೆಯಲ್ಲಿ ನೆರೆದಿದ್ದ ಚಿಣ್ಣರನ್ನು ನೋಡಿ ನೆನಪಿನ ಅಂಗಳದ ಆಳಕ್ಕೆ ಇನ್ನಷ್ಟು ಇಳಿದರು.

1960-61ರಲ್ಲಿ ನಾನು ಈ ಶಾಲೆಯ ವಿದ್ಯಾರ್ಥಿ ಆಗಿದ್ದೆ. ನಮ್ಮೂರಿಂದ ಶಾಲೆಗೆ ನಡೆದು ಬರುತ್ತಿದ್ದೆ. ನಾನು ಪ್ರೈಮರಿ ಶಾಲೆಗೆ ಹೋದವನಲ್ಲ.

ವೀರಮಕ್ಕಳ ಕುಣಿತ ಕಲಿಯುವಾಗ ಮರಳಿನಲ್ಲಿ ಅಕ್ಷರ ಅಭ್ಯಾಸ ಮಾಡುತ್ತಿದ್ದೆ. ಬಳಪ, ಸೀಮೆಸುಣ್ಣ, ಸ್ಲೇಟು ಇರಲಿಲ್ಲ. ಐದನೇ ತರಗತಿಗೆ ನೇರವಾಗಿ ಪ್ರವೇಶ ಪಡೆದುಕೊಂಡೆ.

ನಮ್ಮ ಮನೆಗೆ ಬಂದ ಮೇಷ್ಟ್ರು ರಾಜಪ್ಪ ಓದು, ಬರಹ ಬರುತ್ತಿದ್ದ ನನ್ನನ್ನು ನೇರವಾಗಿ ಐದನೇ ತರಗತಿಗೆ ಸೇರಿಸಿದರು. ಜನ್ಮ ದಿನಾಂಕ ಸಹ ಗೊತ್ತಿರಲಿಲ್ಲ. ಮೇಷ್ಟ್ರು ಮೇಲೆ, ಕೆಳಗೆ ನೋಡಿ ಒಂದು ದಿನಾಂಕ ಕೊಟ್ಟರು.

ಎಂಟನೇ ತರಗತಿಗಾಗಿ ಇಲ್ಲಿಗೆ ಬಂದಾಗ ಗುರುಲಿಂಗ ದೇವರು ಎಂಬ ಶಿಕ್ಷಕರು ಇದ್ದರು. ಬಹಳ ಹೊಡೆಯುತ್ತಿದ್ದರು. ಚಡ್ಡಿಯಲ್ಲಿ ಇರುತ್ತಿದ್ದ ನಮಗೆ ಒಳ ಶುಂಠಿ ಹಿಡಿಯುತ್ತಿದ್ದರು. ಆದರೆ, ಅವರು ಪಾಠ ಚೆನ್ನಾಗಿ ಮಾಡುತ್ತಿದ್ದರು. ಅವರು ಅಂದು ಹೇಳಿಕೊಟ್ಟ ವ್ಯಾಕರಣ ಇಂದಿಗೂ ನೆನಪಿನಲ್ಲಿ ಉಳಿದಿದೆ ಎಂದರು ಮುಖ್ಯಮಂತ್ರಿಗಳು.

ಅಷ್ಟೇ ಅಲ್ಲ, ವ್ಯಾಕರಣ, ವ್ಯಂಜನಗಳು, ಅಲ್ಪ ಪ್ರಾಣ, ಮಹಾ ಪ್ರಾಣ, ಸಂಧಿಗಳ ಬಗ್ಗೆ ಮಕ್ಕಳಿಗೆ ಮೇಷ್ಟ್ರು ರೀತಿ ಪಾಠ ಮಾಡಿದರು. ತಾವು ಕೇಳಿದ ಪ್ರಶ್ನೆಗಳಿಗೆ ಮಕ್ಕಳು ನೀಡಿದ ಕರಾರುವಾಕ್ಕಾದ ಉತ್ತರ ಕೇಳಿ ಸಂತಸಗೊಂಡರು.

ನಾನು ಈ ಶಾಲೆಯ ನಂಬರ್ ಒನ್ ವಿದ್ಯಾರ್ಥಿ ಆಗಿದ್ದೆ. ಹೀಗಾಗಿ ಇಲ್ಲಿ ಹಾಕಿದ ಅಡಿಪಾಯ ಮುಂದೆ ಚೆನ್ನಾಗಿ ಓದಲು ಅನುಕೂಲ ಆಯಿತು.

ಸರ್ಕಾರಿ ಶಾಲೆಯಲ್ಲಿ ಓದಿದರೆ, ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದರೆ ದಡ್ಡರಾಗುತ್ತಾರೆ ಎಂಬುದು ಸುಳ್ಳು. ಮಾತೃಭಾಷೆಯಲ್ಲಿ ಪಡೆಯುವ ಶಿಕ್ಷಣವೇ ಉತ್ತಮ ಎಂದು ಸಿಎಂ ತಿಳಿಸಿದರು.

ಕನ್ನಡ ಮಾಧ್ಯಮದಲ್ಲಿ ಓದದಿದ್ದರೆ ಅಲ್ಪ ಪ್ರಾಣ, ಮಹಾ ಪ್ರಾಣ ಗೊತ್ತಾಗದೇ ಇದೇನಪ್ಪ ನಮ್ಮ ಪ್ರಾಣಕ್ಕೇ ಬಂತಲ್ಲ ಎನ್ನುವಂತೆ ಆಗುತ್ತದೆ ಎಂದು ಚಟಾಕಿ ಹಾರಿಸಿದರು.

ರಾಜಪ್ಪ ಅವರು ನನ್ನನ್ನು ಶಾಲೆಗೆ ಸೇರಿಸದೇ ಹೋಗಿದ್ದರೆ ವಿದ್ಯಾವಂತ ಆಗುತ್ತಿರಲಿಲ್ಲ. ಮುಖ್ಯಮಂತ್ರಿಯೂ ಆಗುತ್ತಿರಲಿಲ್ಲ ಎಂದು ಹೇಳಿ ಮುಖ್ಯಮಂತ್ರಿಗಳು ಗುರುಗಳನ್ನೂ ನೆನೆದರು.

ಹಳೆಯ ವಿದ್ಯಾರ್ಥಿಯಾಗಿ ಸ್ವಂತ ಹಣದಿಂದ ಶಾಲೆಗೆ ಕಾಂಪೌಂಡ್ ಮತ್ತು ಗ್ರಂಥಾಲಯ ಮಾಡಿಕೊಡುತ್ತೇನೆ ಎಂದು ಮುಖ್ಯಮಂತ್ರಿಗಳು ಘೋಷಿಸಿದರು.

ಸುಮಾರು ಒಂದು ಗಂಟೆ ಕಾಲ ಮಕ್ಕಳೊಂದಿಗೆ ಬೆರೆತು ಹೋದ ಮುಖ್ಯಮಂತ್ರಿಗಳು, ನಿಮ್ಮ ಭವಿಷ್ಯ ಉಜ್ವಲವಾಗಲಿ ಎಂದು ಹಾರೈಸಿ, ಉಲ್ಲಸಿತರಾಗಿ ಅಲ್ಲಿಂದ ಹೊರಟರು.

--------------------------